Literacy for a Billion

Movie: Avane Nanna Gando
Year: 1989

Song: Vichar Hudugiyadadre Gullo
Lyricist: Hamsalekha

ವಿಚಾರ ಹುಡುಗಿಯದಾದ್ರೆ ಗುಲ್ಲೋ ಗುಲ್ಲೂ
ಹೋಯ್ ಗುಲ್ಲೋ ಗುಲ್ಲೂ
ಪ್ರಚಾರ ಹುಡುಗಿಯದಾದ್ರೆ ಥ್ರಿಲ್ಲೋ ಥ್ರಿಲ್ಲೂ
ಹೋಯ್ ಥ್ರಿಲ್ಲೋ ಥ್ರಿಲ್ಲೂ

ನಮ್ಮ ನಾಡಲ್ಲಿ ನಾರೀಯಾ
ದೇವತೆ ಅಂತಾರೆ
ಸೋಪು ಟೂತ್ ಪೇಸ್ಟ್ ಮಾರೋಕೆ
ಬೆತ್ತಲೆ ಮಾಡ್ತಾರೇ... ಹೋಯ್

ವಿಚಾರ ಹುಡುಗಿಯದಾದ್ರೆ ಗುಲ್ಲೋ ಗುಲ್ಲೂ
ಹೋಯ್ ಗುಲ್ಲೋ ಗುಲ್ಲೂ
ಪ್ರಚಾರ ಹುಡುಗಿಯದಾದ್ರೆ ಥ್ರಿಲ್ಲೋ ಥ್ರಿಲ್ಲೂ
ಹೋಯ್ ಥ್ರಿಲ್ಲೋ ಥ್ರಿಲ್ಲೂ

ವಾಶಿಂಗ್ ಪೌಡರ್ ನಿರ್ಮಾ
ವಾಶಿಂಗ್ ಪೌಡರ್ ನಿರ್ಮಾ
ನಿರ್ಮಾ

ಒಳಗೆ ತೊಡುತ್ತಿದ್ದ
ಬಟ್ಟೆ ಬರೆಯೆಲ್ಲ
ಎದ್ದು ಹೊರಗಡೆಗೆ ಬಂದಿದೇ
ಕ್ರೀಮು ಸೋಗಳಿಗೆ
ಕಣ್ಣು ತೇಲಿಸುವ
ಮದನ ನಾರಿಯರೆ ಬೇಕಿದೇ

ಮೋಟಾರ್ ಬೈಕು
ತೋರ್ಸೋಕೂ
ಹಿಂದೆ ಚೆಲುವೆಯೇ
ಚಪ್ಲಿ ಡಿಸೈನ್
ತಿಳ್ಸೋಕೂ
ಮುಂದೆ ಬೆಡಗಿಯೇ

ಮೂರು ಕಾಸಿನ
ಬ್ಲೇಡಿಗೂ
ಲೇಡಿ ಕೈ ಬೇಕೂ
ಬ್ಯಾಟು ಬಾಲುಗಳ
ನಡುವಲ್ಲೂ
ಬಾಲೆಯರೇ ಬೇಕೂ

ವಿಚಾರ ಹುಡುಗಿಯದಾದ್ರೆ ಗುಲ್ಲೋ ಗುಲ್ಲೂ
ಹೋಯ್ ಗುಲ್ಲೋ ಗುಲ್ಲೂ
ಪ್ರಚಾರ ಹುಡುಗಿಯದಾದ್ರೆ ಥ್ರಿಲ್ಲೋ ಥ್ರಿಲ್ಲೂ
ಹೋಯ್ ಥ್ರಿಲ್ಲೋ ಥ್ರಿಲ್ಲೂ

ಗೋಲ್ಡ್ ಸ್ಪಾಟ್ ದ ಝಿಂಗ್ ಥಿಂಗ್
ಗೋಲ್ಡ್ ಸ್ಪಾಟ್ ದ ಝಿಂಗ್ ಥಿಂಗ್

ತಂಪು ಪಾನೀಯ
ಜಾಹೀರಾತೀಗೆ
ಬಿಸಿಯ ಹುಡುಗಿಯರೆ ಬೇಕಿದೆ

Literacy for a Billion

ಕಾಮನಾ ಮಾರೂ
ಜಾಹಿರಾತಲ್ಲು
ಹುಡುಗಿ ಅರೆಬೆತ್ತಲಾಗಿದೆ

ಕಲೆಯಾಗಿ
ಬಂದವಳು
ಶಿಲೆಯಾದಳೂ

ಶಿಲೆಯಾಗಿ
ಹೊರಬಂದು
ಕೊಲೆಯಾದಳೂ

ನಮ್ಮ ನಾಡಲ್ಲಿ ನಾರೀಯಾ
ದೇವತೆ ಅಂತಾರೆ
ಸೋಪು ಟೂತ್ ಪೇಸ್ಟ್ ಮಾರೋಕೆ
ಬೆತ್ತಲೆ ಮಾಡ್ತಾರೇ ಹೋಯ್
ವಿಚಾರ ಹುಡುಗಿಯದಾದ್ರೆ ಗುಲ್ಲೋ ಗುಲ್ಲೂ
ಹೋಯ್ ಗುಲ್ಲೋ ಗುಲ್ಲೂ
ಪ್ರಚಾರ ಹುಡುಗಿಯದಾದ್ರೆ ಥ್ರಿಲೋ ಥ್ರಿಲ್ಲೂ
ಹೋಯ್ ಥ್ರಿಲೋ ಥ್ರಿಲ್ಲೂ

ನಮ್ಮ ನಾಡಲ್ಲಿ ನಾರೀಯಾ
ದೇವತೆ ಅಂತಾರೆ
ಸೋಪು ಟೂತ್ ಪೇಸ್ಟ್ ಮಾರೋಕೆ
ಬೆತ್ತಲೆ ಮಾಡ್ತಾರೇ ಹೋಯ್

ವಿಚಾರ ಹುಡುಗಿಯದಾದ್ರೆ ಗುಲ್ಲೋ ಗುಲ್ಲೂ
ಹೋಯ್ ಗುಲ್ಲೋ ಗುಲ್ಲೂ
ಪ್ರಚಾರ ಹುಡುಗಿಯದಾದ್ರೆ ಥ್ರಿಲೋ ಥ್ರಿಲ್ಲೂ
ಹೋಯ್ ಥ್ರಿಲೋ ಥ್ರಿಲ್ಲೂ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*